ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

*ಒಂದೇ ಸಂದೇಹ; ರಾಜಕಾರಣಿಗೆ ನಾಲಿಗೆ ಇರುವುದೇಕೆ? ರಾಮ್ರಾಮಾ, ಉತ್ತರಿಸದಿದ್ದರೆ ಬೇತಾಳ ಪಂಚವಿಂಶತಿಯನ್ನೇ ಹುಡುಕುತ್ತೇನೆ!*



ರಾಜಕಾರಣಿಗೆ ನಾಲಿಗೆ ಇರುವುದಿಲ್ಲ; ಅದು ಪೊರಕೆ; ಸಿಕ್ಕಿದ್ದನ್ನೆಲ್ಲ ಗುಡಿಸಿ ಒಳಹಾಕಿಕೊಳ್ಳುವುದಕ್ಕೆ.

ಪ್ರದೀಪ್ ಎನ್, ಚೆಲುವರಸನಕೊಪ್ಪಲು

*ಆಗುವುದೆಲ್ಲ ಒಳ್ಳೆಯದಕ್ಕೆ ಎಂದು ಹೇಳುತ್ತಾರೆ. ಹೆಣ್ಣು ಅತ್ಯಾಚಾರಕ್ಕೊಳಗಾಗುವುದು ಒಳ್ಳೆಯದಕ್ಕಾಗಿಯೆ?*

ಅದು ಪ್ರಕೃತಿಯ ವಿಕೋಪಕ್ಕೆ ಅನ್ವಯಿಸುವ ಮಾತು; ವಿಕೃತಿಯ ಪ್ರಪಾತಕ್ಕಲ್ಲ.

ಮಲ್ಲನಗೌಡ ಸಿ. ಪಾಟೀಲ, ರಂಭಾಪೂರ

*ಗಣರಾಜ್ಯೋತ್ಸವಕ್ಕಿಂತಲೂ ಪ್ರೇಮಿಗಳ ದಿನಾಚರಣೆ ಜನಪ್ರಿಯವಾಗುತ್ತಿದೆ. ಏಕೆ?*

ಏಕೆಂದರೆ ಗಣರಾಜ್ಯ ಮರೀಚಿಕೆ, ಪ್ರೇಮ ಓಯಸಿಸ್.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ಬೆಳಗಿನ ಜಾವ ಕೂಗುವುದು ಹುಂಜವಾದರೂ ಕೋಳಿ ಕೂಗಿತು ಎಂದು ಸುಳ್ಳು ಹೇಳುವುದೇಕೆ?*



ಹೆಣ್ಣು ಹತ್ತಿರದಲ್ಲಿರುವಾಗ ಗಂಡುಪ್ರಾಣಿ ಅಷ್ಟೆಲ್ಲ ದನಿ ಏರಿಸುವ ಧೈರ್ಯ ಮಾಡಲಾರನೆಂಬ ದೃಢ ನಂಬಿಕೆ.

ಗಾಯತ್ರಿ, ಬೆಂಗಳೂರು

*ಕೆಲವರ ಸಾವು ತುಂಬ ದಿನ ಕಾಡುತ್ತಲೇ ಇರುತ್ತದಲ್ಲ....?*

ನಿಜ. ಟಿಆರ್‌ಪಿ ಇರುವಷ್ಟು ದಿನ ಚಾನಲ್‌ಗಳು ಉಜ್ಜುತ್ತಲೇ ಇರುತ್ತವೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಪ್ಪಾ, ನಗುವ, ನಗಿಸುವ, ನಗದೇ ಇರುವವರಿಗೆ ಇರುವ ಸಂಬಂಧ?*

ಎಲ್ಲದಕ್ಕೂ 'ನಗದು' ಕಾರಣ!

ಎಚ್.ಆರ್. ದೇಸಾಯಿ, ರಾಯಚೂರು

*ಗ್ಲಾಸಿನಲ್ಲಿ ಹಾಕಿದಾಗ ಅದೇನು ಕೈ ಸುಡುವುದಿಲ್ಲ. ಆದರೂ ಅದನ್ನು ಹಾಟ್ ಡ್ರಿಂಕ್ಸ್ ಎನ್ನುವುದೇಕೆ?*

**H – House; O – Office; T – transit;** ಈ ಮೂರು ಕಡೆಯೂ ಮಾನ, ಮರ್ಯಾದೆಗಳನ್ನೇ ಸುಡುವುದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಎಷ್ಟೇ ಸಂಪತ್ತಿದ್ದರೂ ಆರೋಗ್ಯದ ಸಂಪತ್ತಿಲ್ಲದಿದ್ದರೆ ಏನಾಗಬಹುದು ಸಾರ್?*

ಸಂಪತ್ತು ಹಂತಹಂತವಾಗಿ ಸ್ಕ್ಯಾನಿಂಗ್ ಸೆಂಟರ್, ಲ್ಯಾಬ್, ವೈದ್ಯರಿಗೆ ಟ್ರಾನ್ಸ್‌ಫರ್ ಆಗಬಹುದು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಹುಲಿಯ ಚರ್ಮದ ಮೇಲೆ ಮಲಗುವ ಸನ್ಯಾಸಿಗೂ, ಹುಲಿಯ ಜೊತೆಯೇ ಮಲಗುವ ಸಂಸಾರಿಗೂ ಏನು ವ್ಯತ್ಯಾಸ?*

ಕನಸಿನಲ್ಲಿ ಸಂಸಾರಿ ಚರ್ಮದೊಡನೆ, ಸನ್ಯಾಸಿ ಹುಲಿಯೊಡನೆ ಇರುತ್ತಾರಂತೆ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

*ರೈಲು ಬಿಡುವವರಿಗೆ ಬಸ್ ಯಾಕೆ ಒಗ್ಗೋಲ್ಲ?*

ಜೊತೆಯಿರುವವನು ಹೋಲ್ಡಾನ್ ಎಂದು ಬ್ರೇಕ್ ಹಾಕಿಸುವುದರಿಂದ.

ಬಿ.ಆರ್. ವಿಜಯಲಕ್ಷ್ಮಿ, ಬೆಂಗಳೂರು

*ಎಲ್ಲ ವೃತ್ತಿಗಳಿಗೂ ವಯೋಮಿತಿ, ವಿದ್ಯಾರ್ಹತೆ, ಪ್ರವೇಶ ಪರೀಕ್ಷೆ, ನಿವೃತ್ತಿ ಇರುತ್ತವೆ. ರಾಜಕೀಯಕ್ಕೇಕಿಲ್ಲ?*

ಏಕೆಂದರೆ ರಾಜಕೀಯ ವೃತ್ತಿಯಲ್ಲ; ದುಶ್ಚಟ; ಗೀಳು.

ಕೆ.ಎಂ. ವಿಭೂತಿ, ಹರಿಹರ

*ಆ ದೇವರು ಅಮಲಿನಲ್ಲಿರುವ ರಸಮಯ ಸಮಯದಲ್ಲಿ ವಿಶ್ವಸುಂದರಿಯರ ಉಗಮವಾಯಿತಂತೆ. ಹೌದಾ?*

ಅಮಲಿನಲ್ಲಷ್ಟೇ ಅಲ್ಲ, ದೇವನ ಹೆಂಡತಿ ಸನಿಹದಲ್ಲಿಲ್ಲದ ಸಮಯದಲ್ಲಿ ರಚಿಸಿದ ಕೃತಿಯವಳು.

## ಬಹುಮಾನಿತ ಪ್ರಶ್ನೆ

ಪಿ. ಗೋವಿಂದರಾಜ್, ಶಿವಮೊಗ್ಗ

*ಐಸ್‌ಕ್ರೀಂಗೂ, ಶೇವಿಂಗ್ ಕ್ರೀಂಗೂ ಇರುವ ವ್ಯತ್ಯಾಸವೇನು?*

ಶೇವಿಂಗ್ ಕ್ರೀಂ ಹಚ್ಚಿಕೊಂಡವನೇ ಬೋಳಿಸಿಕೊಳ್ಳುತ್ತಾನೆ; ಐಸ್‌ಕ್ರೀಂ ತಿನ್ನುವವರಾರೋ, ಬೋಳಿಸಿಕೊಳ್ಳುವವರಾರೋ.....

ಅಕ್ಷಯ ಜೈನ್, ಹೂವಿನಹಡಗಲಿ

*ಆಧುನಿಕ ಬುದ್ಧಿಜೀವಿಗಳು ಉದ್ದ ಕೂದಲಿನವರಾಗಿರುತ್ತಾರೆ. ಏಕೆ ಸಾರ್?*

ಸಂಸ್ಕೃತಿ, ಪರಂಪರೆಗಳನ್ನು ಬೋಳಿಸುವ ಯತ್ನದಲ್ಲಿ ಸ್ವಂತ ತಲೆ ಬೋಳಿಸಿಕೊಳ್ಳಲು ಸಮಯ ಸಿಕ್ಕಿರುವುದಿಲ್ಲ.

ಎಂ.ಎ. ಕುಮಾರ್, ಬೆಂಗಳೂರು

*ನದಿಯ ತೀರಕ್ಕೂ, ಸಮುದ್ರದ ತೀರಕ್ಕೂ ಏನು ವ್ಯತ್ಯಾಸ?*

ಒಂದು ಬ್ಯಾಂಕಿನ ಆರ್‌ಡಿ ಅಕೌಂಟ್‌ನಂತೆ– ಸುಗಮ, ಸುಭದ್ರ. ಇನ್ನೊಂದು ಷೇರುಪೇಟೆಯಂತೆ – ಅಭದ್ರ, ಅಲ್ಲೋಲಕಲ್ಲೋಲ.

ಕುಮಾರ ಚಲವಾದಿ, ಹೊಳೆನರಸಿಪುರ

*ದೆವ್ವ, ಭೂತಗಳ ಜೊತೆ ಬದುಕುವವರೂ ಇದ್ದಾರೆಯೆ?*



ಇದ್ದಾರೆ. ನಮ್ಮ ಬಹುತೇಕ ಪುಢಾರಿಗಳ ಸತಿಸುತರು.

ಸೀಮಂತಿನಿ ದೇಸಾಯಿ, ಬೆಂಗಳೂರು

*ಜಯಲಲಿತೆ, ಶಶಿಕಲಾ, ಪನ್ನೀರ್ ಸೆಲ್ವಂರ ಸ್ಥಿತಿ ಕಂಡು ನಾವು ಅಳಬೇಕೋ, ನಗಬೇಕೋ?*

ಈ ಬರಗಾಲದಲ್ಲಿ ಇಡೀ ರಾಜ್ಯ ಅಳುವುದೇ ಸೂಕ್ತ – ಆ ಕಣ್ಣೀರು ಹರಿಸಿಯಾದರೂ ತಮಿಳರ ನೀರಿನ ದಾಹ ಹಿಂಗಿಸಲು.

ಬಸವರಾಜ ನೇಳಗೆ, ಭಾಲ್ಕಿ

*ಭಾರತದಲ್ಲಿ ಕುಡಿಯುವ ನೀರಿನ ಬರ ಹಿಂಗಿಸಲು ಗಂಗಾ–ಕಾವೇರಿ ಯೋಜನೆ ಯಾವಾಗ ಚಾಲೂ ಆಗಬಹುದು?*

ಈ ಪ್ರಶ್ನೆಯನ್ನು ಕೇಳಿದ ಬ್ರಹ್ಮನೇ 'ನನ್ನ ಜನ್ಮದಲ್ಲಿ ಆಗುವುದಿಲ್ಲ' ಎಂದು ಅಳುತ್ತಾ ಹೋಗಿಬಿಟ್ಟ.

■ ರಾಮ್